# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

## ಸಿ.ಸಿ. 1003/2010

ಚಾಸಾ ಃ **5**

ಪ್ರಾಸಾ ಃ **14**

| | | |
|---|---|---|
| **ಹೆಸರು** | : | ರಮೇಶ |
| **ತಂದೆಯ ಹೆಸರು** | : | ರಾಮ್ |
| **ವಯಸ್ಸು** | : | 55 ವರ್ಷ |
| **ಉದ್ಯೋಗ** | : | ಖಾಸಗಿ ಕೆಲಸ |
| **ವಾಸಸ್ಥಳ** | : | ಬೊಟ್ಟೋಳಿ ಗ್ರಾಮ |

**ದಿನಾಂಕ ಃ 24-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

1. ಚಾಸಾ-4 ರವರ ಪರಿಚಯ ಇರುವುದಿಲ್ಲ. ಆರೋಪಿ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು ಅದು ಅಮಾನತ್ತು ಮಹಜರು ಆಗಿದ್ದು, ಅದನ್ನು ಈಗಾಲಗೇ ನಿಪಿ-4 ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-4 (ಸಿ) ಎಂದು ಗುರುತಿಸಲಾಯಿತು. ನಾನು ತುಂಬಾ ವರ್ಷಗಳ ಹಿಂದೆ ಸಹಿಯನ್ನು ಹಾಕಿರುತ್ತೇನೆ. ನಿಪಿ-4 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಂದೆ ಪೊಲೀಸರು ಮಾದರಿಗಾಗಿ ಆರೋಪಿಯ ಹಸ್ತಾಕ್ಷರವನ್ನು ಪಡೆದಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಮುಖ್ಯ ವಿಚಾರಣೆ ಃ ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು ಃ ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ದಿಃ04.02.2010 ರಂದು ಸಮಯ ಮಧ್ಯಾಹ್ನ 3 ರಿಂದ ಸಂಜೆ 6 ರವರೆಗೆ ಪೋಲಿಸರು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಪೋಲಿಸರು 6 ಬಿಳಿ ಹಾಳೆಯನ್ನು ಕೊಟ್ಟು, ಆರೋಪಿತನ ಒಂದು ಪ್ಯಾರಾ ಇಂಗ್ಲೀಷ್ ಅಕ್ಷರವನ್ನು ಬಿಳಿ ಹಾಳೆಯ ಮೇಲೆ ಬರೆಸಿ, ಹಾಳೆಯ ಕೆಳಭಾಗದಲ್ಲಿ ನನ್ನ ಹಾಗೂ ಚಾಸಾ-4 ರವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಹಾಳೆಗೆ RD (A) 1 ರಿಂದ RD (A) 6 ಕ್ರಮ ಸಂಖ್ಯೆಯನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನಂತರ ಆರೋಪಿತನಿಗೆ ಒಟ್ಟು 24 ಬಿಳಿ ಹಾಳೆಗಳನ್ನು ಮತ್ತು ಒಂದು ಖಾಲಿ ಖಾಕಿ ಕವರ್ ಗೆ ಹಾಕಿ ಅದರ ಮೇಲೆ S ಎಂಬ ಅಕ್ಷರದಿಂದ ಬರೆದು, ಮುಂದಿನ ಕ್ರಮಕ್ಕೆ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಸದರಿ ಈ ವಿಚಾರ ಕುರಿತು ಪೋಲಿಸರಿಗೆ ದಿಃ31.08.2010 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿಪಿ-15 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇಲ್ಲ**

**ಮರು ವಿಚಾರಣೆ ಃ ಇಲ್ಲ**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

(ಪ್ರದೀಪ ಪೋತದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.